# ಕೆಂಡಸಂಪಿಗೆಯ ಡಿಸ್ಕೊ

■ ಸುಮಲತಾ ಎನ್.

'ಕೆಂಡಸಂಪಿಗೆ', 'ಕಾಲೇಜ್ ಕುಮಾರ' ಸಿನಿಮಾಗಳಲ್ಲಿ ನಟಿಸಿರುವ, 'ಕಾಲಾಪತ್ಥರ್'ನಲ್ಲಿ ನಟ–ನಿರ್ದೇಶಕನಾಗಿ ಹೊಸ ಅನುಭವ ಪಡೆದುಕೊಂಡಿರುವ ನಟ ವಿಕ್ಕಿ ವರುಣ್ ಇದೀಗ 'ಡಿಸ್ಕೊ' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಈ ಸಿನಿಮಾ ಕಥೆಯೂ ಅವರದ್ದೇ ಆಗಿದ್ದು, ತಮ್ಮ ಹೊಸ ಪ್ರಯತ್ನಗಳ ಕುರಿತು 'ಸುಧಾ'ದೊಂದಿಗೆ ಮಾತನಾಡಿದ್ದಾರೆ.

◆ ನಟನೆ, ನಿರ್ದೇಶನ, ಬರವಣಿಗೆ... ಸಿನಿಮಾರಂಗದ ಹೊಸ ಅನುಭವಗಳು ಹೇಗಿವೆ?

ಸೂರಿ ಸರ್ ಹತ್ತಿರ ಸುಮಾರು ಐದು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದೆ. ಯೋಗರಾಜ್ ಸರ್ ಹತ್ತಿರವೂ ಕೆಲಸ ಮಾಡಿದ್ದೆ. ಹೀಗಾಗಿ ಕ್ಯಾಮೆರಾ ಹಿಂದೆ ಕೆಲಸ ಮಾಡುವ ಅಭ್ಯಾಸವಿತ್ತು. ಎರಡು ಸಿನಿಮಾಗಳಲ್ಲಿ ನಟಿಸಿದೆ. 'ಕಾಲಾಪತ್ಥರ್' ಸಿನಿಮಾದಲ್ಲಿ ನಟನೆ–ನಿರ್ದೇಶನ ಎರಡನ್ನೂ ಮಾಡಿದೆ. ಕ್ಯಾಮೆರಾಗೆ ಸ್ವಿಚ್ ಆನ್– ಸ್ವಿಚ್ ಆಫ್ ಆಗುವುದು ಹೊಸ ಅನುಭವ ನೀಡಿತು. ಕಲಿಯಲು ತುಂಬಾ ವಿಷಯಗಳು ಸಿಕ್ಕಿದವು. ಯಾರ ಯಾರ ದೃಷ್ಟಿಕೋನದಲ್ಲಿ ಏನೇನು ಸಮಸ್ಯೆಗಳು ಬರುತ್ತವೆ, ಅದನ್ನು ಹೇಗೆ ಪರಿಹರಿಸಬೇಕು ಎಂಬ ಸವಾಲನ್ನು ಕಂಡುಕೊಂಡೆ. ಈಗ 'ಡಿಸ್ಕೊ' ಸಿನಿಮಾ ಕಥೆ ಬರೆಯುತ್ತಿದ್ದೇನೆ.

'ಕಾಲೇಜ್ ಕುಮಾರ' ಸಿನಿಮಾಗೆ ನಾನು ಮತ್ತು ಸಂತು ಸೇರಿ ಕಥೆ ಬರೆದಿದ್ದು. 'ಕಾಲಾಪತ್ಥರ್' ಸಿನಿಮಾಗೆ ಸ್ಕ್ರೀನ್ ಪ್ಲೇ, ಡೈಲಾಗ್ ಬರೆದಿದ್ದೆ. ಬರವಣಿಗೆ ತೀರಾ ಹೊಸತಲ್ಲ. ಈ ಸಿನಿಮಾಗೆ ಕಥೆ ನನ್ನದೇ, ಕಥೆ ಬರೆಯುತ್ತಿರುವುದು ನಾನೇ.

◆ 'ಡಿಸ್ಕೊ' ಸಿನಿಮಾದಿಂದ ಏನನ್ನು ನಿರೀಕ್ಷಿಸಬಹುದು?

'ಡಿಸ್ಕೊ' ನನ್ನ ಪಾತ್ರದ ಹೆಸರು. ನನ್ನ ಜೀವನದಲ್ಲಿನ ನೈಜ ಘಟನೆಯ ಸುತ್ತಲಿನ ಸಂಗತಿಗಳನ್ನೇ ಇಟ್ಟುಕೊಂಡು ಕಥೆ ಹೆಣೆದು ಸಿನಿಮಾ ಮಾಡುತ್ತಿದ್ದೇವೆ. ಹರಿ ಸಂತೋಷ್ ನಿರ್ದೇಶನ ಮಾಡುತ್ತಿದ್ದಾರೆ. ಸಿನಿಮಾ, ಥ್ರಿಲ್ಲಿಂಗ್ ಫನ್ ರೈಡ್‌ನಂತೆ ಇರುತ್ತದೆ. ಮೆಟಫರಿಕ್ ಆಗಿ ಹಲವು ವಿಷಯಗಳನ್ನು ಹೇಳುತ್ತೇವೆ. ಕಲಾತ್ಮಕವಾಗಿಯೂ ಇದೆ, ಸಾಮಾನ್ಯ ಸಂಗತಿಗಳನ್ನೂ ವಿನೋದವಾಗಿ ತೋರಿಸಲಾಗುತ್ತದೆ.

◆ 'ಕೆಂಡಸಂಪಿಗೆ'ಯಿಂದ 'ಡಿಸ್ಕೊ'ವರೆಗಿನ ಕಲಿಕೆ?

ಸಿನಿಮಾರಂಗದಲ್ಲಿ ನಾನು ಇರುವುದೇ ನನ್ನ ಪಾಲಿಗೆ ದೊಡ್ಡ ವಿಷಯ. ನನ್ನದು ಚಾಮರಾಜನಗರ. ಮಾಯಾನಗರಿ ಬೆಂಗಳೂರಿಗೆ ಬಂದು ಒಬ್ಬ ನಾಯಕ ನಟನಾಗುತ್ತೇನೆ, ಸಿನಿಮಾ ನಿರ್ದೇಶನ ಮಾಡುತ್ತೇನೆ ಎಂಬುದೆಲ್ಲ ನನ್ನ ಕಲ್ಪನೆಯಲ್ಲಿಯೂ ಇರಲಿಲ್ಲ. ನನ್ನ ಕಲ್ಪನೆಯನ್ನು ಮೀರಿ ನನ್ನ ಜೀವನ ಹೋಗುತ್ತಿದೆ ಎಂಬುದೇ ಖುಷಿ ವಿಷಯ. ದಿನೇ ದಿನೇ ಹೊಸ ಕಲಿಕೆ ಸಾಗುತ್ತಲೇ ಇದೆ.

◆ ಸಿನಿಮಾರಂಗಕ್ಕೆ ಬರದೇ ಇದ್ದಿದ್ದರೆ?

ಪೊಲೀಸ್ ಕಾನ್‌ಸ್ಟೇಬಲ್ ಆಗಬೇಕು ಅಂದುಕೊಂಡಿದ್ದೆ. ಬಹಳ ಆಸೆ ಇತ್ತು. ಅದಾಗಲಿಲ್ಲ. ಕ್ರಿಕೆಟರ್ ಆಗಬೇಕು ಅಂದುಕೊಂಡೆ. ಅದೂ ಯಾಕೋ ಸರಿ ಹೋಗಲಿಲ್ಲ. ಚಿಕ್ಕವನಿದ್ದಾಗಿನಿಂದಲೂ ಸಿನಿಮಾ ಆಸಕ್ತಿ ಇತ್ತು. ಆ ಆಸಕ್ತಿ ಈಗ ಅನ್ನ ಸಿಗುವ ಹಾಗೆ ಮಾಡಿದೆ.

◆ ಸಿನಿಮಾರಂಗದಲ್ಲಿ ಏನನ್ನು ಎಕ್ಸ್‌ಪ್ಲೋರ್ ಮಾಡುವ ಆಸೆಯಿದೆ?

ಈಗ ನನ್ನ ನಾಲ್ಕನೇ ಸಿನಿಮಾ ಆರಂಭಿಸಿದ್ದೇನೆ. ನಾನಿನ್ನೂ ಹೊಸಬ. ಪ್ರತಿ ಸಿನಿಮಾವೂ ನನ್ನ ಮೊದಲ ಸಿನಿಮಾ ಅಂದುಕೊಂಡೇ ಮಾಡುತ್ತೇನೆ. ಪ್ರತಿ ಸಿನಿಮಾ ನನಗೆ ಹೊಸ ಸಿನಿಮಾದಂತೆಯೇ ಕಾಣುತ್ತದೆ, ಹೊಸತನ್ನು ಕಲಿಸಿಕೊಡುತ್ತಲೇ ಇದೆ.

◆ ಸಿನಿಮಾಗಳ ಸಂಖ್ಯೆಯಲ್ಲಿ ಹಿಂದೆ ಬಿದ್ದೆ ಎಂಬ ಭಾವ ಬಂದಿಲ್ಲವೇ?

ನನಗೆ ಸಂಖ್ಯೆಗಿಂತ ಸಿನಿಮಾ ಕಥೆಯೇ ಮುಖ್ಯ. ಕಥೆ ನನ್ನ ಮೊತ್ತಮೊದಲ ಆದ್ಯತೆ ಕೂಡ. ಕಥೆ ಚೆನ್ನಾಗಿದ್ದರೆ ಆ ಸಿನಿಮಾ ಮಾಡಲು ಒಪ್ಪಿಕೊಳ್ಳುತ್ತೇನೆ. ದುಡ್ಡಿಗಾಗಿ ಇಷ್ಟ ಇಲ್ಲದೆ ಇರುವ ಸಿನಿಮಾ ಮಾಡಲು ಹೋಗಿ, ಮಾಡಬೇಕಾದರೆ ನನಗೆ ಇಷ್ಟವಾಗದೇ, ಇದೇನೂ ಆಗಲ್ಲ ಅಂತ ಅನ್ನಿಸಿಯೂ ಸಿನಿಮಾ ಮಾಡುವ ಆ ಬೇಸರಕ್ಕಿಂತ ಮಾಡದೇ ಇರುವುದೇ ಉತ್ತಮ ಎನ್ನುವುದು ನನ್ನ ಅಭಿಪ್ರಾಯ.

◆ ಡಿಸ್ಕೊ ಸಿನಿಮಾ ಹೊರತಾಗಿ ನೀವು ತೊಡಗಿಕೊಂಡಿರುವ ಇತರೆ ಸಿನಿಮಾಗಳು?

'ಡಿಸ್ಕೊ' ಹೊರತಾಗಿ ಎರಡು ಸಿನಿಮಾಗಳಲ್ಲಿ ನಟಿಸುತ್ತಿದ್ದೇನೆ.

■

